1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ
ಸಿ.ಸಿ. ನಂಬ್ರ:2409/2015

ಚಾಸಾ:4 ಪ್ರಾಸಾ:5

ದಿನಾಂಕ: 31.01.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಡಾ. ಶಿವರಾಮ ಶೆಟ್ಟಿ |
| ತಂದೆಯ ಹೆಸರು | : | ಮಂಜಯ್ಯ ಶೆಟ್ಟಿ |
| ವಯಸ್ಸು | : | 85 ವರ್ಷ |
| ಉದ್ಯೋಗ | : | ನಿವೃತ್ತ ವೈದ್ಯರು |
| ವಾಸ ಸ್ಥಳ | : | ಬೆಳ್ವಾಲ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಆರೋಪಿತರ ಪರಿಚಯವಿದೆ. ದಿ: 10-02-2015 ರಂದು ನಾನು ವಡೇರಹೋಬಳಿ ಗ್ರಾಮದಲ್ಲಿ ನನ್ನ ಜಮೀನನ್ನು ನೋಡಲು ಹೋಗಿದ್ದು, ಬೆಳಗ್ಗೆ 10-40ರ ಸಮಯದಲ್ಲಿ ಕಲ್ಲುಗಳನ್ನು ಹಾಕಿ ನನ್ನ ಜಾಗದಲ್ಲಿ ಇದ್ದ ಕಲ್ಲುಗಳನ್ನು ಯಾಕೆ ತೆಗೆಯುತ್ತಿದ್ದೀರಾ ಎಂದು ಆರೋಪಿತರನ್ನು ಪ್ರಶ್ನಿಸಿದಾಗ ಆರೋಪಿತರು ಒಟ್ಟಾಗಿ ನನ್ನ ಮೇಲೆ ಗಲಾಟೆ ಮಾಡಿ 2 ಮತ್ತು 3ನೇ ಆರೋಪಿತರು ಕೈಗಳಿಂದ ಬೆನ್ನು, ದವಡೆ, ಮುಖಕ್ಕೆ ಕೈಯಿಂದ ಹೊಡೆದು ಕಾಲಿನಿಂದ ತುಳಿದಿರುತ್ತಾರೆ. ಆ ವೇಳೆಗಾಗಲೇ ಅವರುಗಳು ಚಾಸಾ-1, 2ರವರೊಂದಿಗೆ ಜಗಳ ಮಾಡಿಕೊಂಡಿದ್ದು, ಅವರಿಗೆ ಹಲ್ಲೆ ಮಾಡಿ ಅವಾಚ್ಯವಾಗಿ ನಿಂಧಿಸಿರುತ್ತಾರೆ. ಆ ವೇಳೆಗೆ ಚಾಸಾ-5 ರವರು ಇದ್ದರು. ನಮ್ಮ ಗಲಾಟೆ ಕೇಳಿ ಅವರೆಲ್ಲರೂ ಕೂಗಾಡಿ ಗಲಾಟೆ ಮಾಡಿರುತ್ತಾರೆ. ಅನಂತರ ನನಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿರುತ್ತಾರೆ. ಅನಂತರ ನಾನು ರಿಕ್ಷಾದಲ್ಲಿ ಕುಂದಾಪುರದ ಸರಕಾರಿ ಆಸ್ಪತ್ರೆಗೆ ಬಂದು ಎಕ್ಸರೇ ತೆಗೆಯಿಸಿ ಚಿಕಿತ್ಸೆ ಪಡೆದಿರುತ್ತೇನೆ. ಪ್ರಕರಣ ದಾಖಲಾದ ನಂತರ ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದ:</u>**

ನಮ್ಮ ಮನೆ ಘಟನಾ ಸ್ಥಳದಿಂದ ಮುಕ್ಕಾಲು ಕಿ.ಮೀ ದೂರವಿದೆ. ಅಲ್ಲಿ ನನ್ನ ಜಾಗ ಇರುವ ಕಾರಣ ಹೋಗಿರುತ್ತೇನೆ. ನನ್ನ ಜಾಗದ ಬಾಬ್ತು ಯಾವುದೇ ಸಿವಿಲ್ ದಾವೆ ಇಲ್ಲ. ಆರೋಪಿತರು ಕೈಗಳಿಂದ ಹೊಡೆದಿರುತ್ತಾರೆ. 3 ಜನ ಆರೋಪಿತರು ಹಿಡಿದು ಹೊಡೆದಿರುತ್ತಾರೆ. 2ನೇ ಆರೋಪಿ ಹಲ್ಲೆ ಮಾಡಿರುತ್ತಾರೆ. ಈ ಘಟನೆಯಾಗುವಾಗ ನನಗೆ 75 ವರ್ಷ. ಈಗ ನನಗೆ 86 ವರ್ಷ. ನನಗೆ ಸದ್ರಿ ಸ್ಥಳಕ್ಕೆ ಹೋಗುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. 2014 ರಿಂದ ತಕರಾರು ಇರುತ್ತದೆ. ನನ್ನ ದವಡೆಗೆ ಪೆಟ್ಟಾಗಿರುತ್ತದೆ. ಸರಕಾರಿ ಆಸ್ಪತ್ರೆಯ ದಂತ ವೈದ್ಯರಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಒಂದು ದವಡೆ ಹಲ್ಲು ಮುರಿದು ಹೋಗಿರುತ್ತದೆ. ದವಡೆಯ ಎಕ್ಸರೇ ಮಾಡಿಸಿದಾಗ ತಿಳಿದು ಬಂದಿರುತ್ತದೆ.

ನನಗೆ 4-5 ಪೆಟ್ಟು ಹೊಡೆದಿರುತ್ತಾರೆ. ಬಟ್ಟೆ ಹರಿದಿರುವುದಿಲ್ಲ. ಬಟ್ಟೆ ಧೂಳಾಗಿರುತ್ತದೆ. ಸದ್ರಿ ಬಟ್ಟೆಯನ್ನು ಪೊಲೀಸರಿಗೆ ಹಾಜರುಪಡಿಸಿಲ್ಲ. ಸದ್ರಿ ದಿನ ನಾನು ಸ್ಥಳಕ್ಕೆ ಹೋಗಿಲ್ಲದೆ ಆರೋಪಿತರು ನನಗೆ ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಹಲ್ಲೆ ಮಾಡುತ್ತಿದ್ದರು. ಆಯುಧಗಳನ್ನು ಬಳಸಿರುವುದಿಲ್ಲ. ಚಾಸಾ-1 ರವರಿಗೆ ರಕ್ತಗಾಯವಾಗಿರಲಿಲ್ಲ. ಆಕೆಯ ಬಟ್ಟೆ ಹರಿದಿರುವ ಬಗ್ಗೆ ನಾನು ಗಮನಿಸಿಲ್ಲ. ನಾನು ಚಾಸಾ-1 ರವರಿಗೆ ಏನಾಯಿತು ಎಂದು ಗಮನಿಸಿಲ್ಲ. ನಾನು ರಿಕ್ಷಾದಲ್ಲಿ ಒಬ್ಬನೇ ಆಸ್ಪತ್ರೆಗೆ ಹೋಗಿರುತ್ತೇನೆ.

ಪ್ರಕರಣವನ್ನು ನಾನೇ ದಾಖಲಿಸಿರುತ್ತೇನೆ. ಆಗ ಸುಮಾರು 11-12 ಗಂಟೆ ಇರಬಹುದು. ಪಿರ್ಯಾದನ್ನು ಯಾವ ರೀತಿ ನೀಡಿದ್ದೇನೆ ಎಂದು ಈಗ ಹೇಳಲು ನೆನಪಿಲ್ಲ. 3 ಜನರ ವಿರುದ್ಧ ಪಿರ್ಯಾದು ದಾಖಲಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಮೇಲೆ ಅಪಾದಿಸಿರುವ ಯಾವುದೇ ಘಟನೆ ಜರುಗಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**